ಓ.ಎಸ್.ನಂ.68-2019
ಪಿ.ಡಬ್ಲು-2

ದಿ: 19-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ವಾಟೀ ಸವಾಲು**: ಪ್ರತಿವಾದಿಗಳ ಪರ ಶ್ರೀಯುತ ಕೆ.ಆರ್.ಎ. ವಕೀಲರಿಂದ.

8. ನನ್ನ ತಂದೆ ನಂಜುಂಡಪ್ಪರವರು ದಾರಿ ಹಕ್ಕು ಸಲುವಾಗಿ ದಾಖಲಿಸಿದ್ದ ಮೂಲ ದಾವೆ ಸಂಖ್ಯೆ 2-2004 ರಲ್ಲಿ ದಾವಾ ಅನುಸೂಚಿಯ ಪೂರ್ವಕ್ಕೆ ರಸ್ತೆ ಎಂದು ಕಾಣಿಸಿರುತ್ತಾರೆ. ನಾನು ದಾರಿ ಹಕ್ಕು ಸಲುವಾಗಿ ದಾಖಲಿಸಿದ್ದ ಮೂಲ ದಾವೆ ಸಂಖ್ಯೆ 28-2020ರಲ್ಲಿ ದಾವಾ ಬಿ ಅನುಸೂಚಿ ಆಸ್ತಿಯ ಪೂರ್ವಕ್ಕೆ ರಸ್ತೆ ಎಂದು ಕಾಣಿಸಿರುತ್ತೇನೆ. ಸಾಕ್ಷಿಯು ಸ್ವತ: ಮುಂದುವರೆದು ನಾನು ನನ್ನ ತಂದೆ ಕಾಣಿಸಿದ್ದ ಚಕ್ಕುಬಂದಿಯನ್ನು ಕಾಣಿಸಿರುತ್ತೇನೆ ಎಂದು ನುಡಿಯುತ್ತಾರೆ. ಮೂಲ ದಾವೆ ಸಂಖ್ಯೆ 2-2004 ದಾವೆಯನ್ನು ಖಾನೇಷುಮಾರಿ ಸಂಖ್ಯೆ 75 ಆಸ್ತಿಯಲ್ಲಿ ದಾರಿ ಬೇಕೆಂದು ದಾಖಲಿಸಲಾಗಿತ್ತು. ನಿಮ್ಮ ತಂದೆ ದಾವೆ ದಾಖಲಿಸುವ ಸಮಯದಲ್ಲಿ ಮತ್ತು ಅದರ ಪೂರ್ವದಲ್ಲಿ ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಪೂರ್ವ ದಿಕ್ಕಿಗೆ ಸರ್ಕಾರಿ ರಸ್ತೆ ಎಂದು ನಮೂದಿರುತ್ತದೆ ಮತ್ತು ಸರ್ಕಾರಿ ಓಣಿ ಎಂದು ಎಲ್ಲಿಯು ನಮೂದು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕಾರ ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಪೂರ್ವ ದಿಕ್ಕಿಗೆ ಸರ್ಕಾರಿ ರಸ್ತೆ ಮತ್ತು ಓಣಿ ಇರುತ್ತದೆ. ಸಾಕ್ಷಿಯು ಸ್ವತ: ಮುಂದುವರೆದು ಸರ್ಕಾರಿ ರಸ್ತೆ ಮತ್ತು ಓಣಿ ಎರಡು ಒಂದೇ ಎಂದು ನುಡಿಯುತ್ತಾರೆ. ಆ ರೀತಿ ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಪೂರ್ವ ದಿಕ್ಕಿನಲ್ಲಿದ್ದ ಸರ್ಕಾರಿ ಓಣಿ ಪ್ರಸ್ತುತ ಸರ್ಕಾರಿ ರಸ್ತೆ ಆಗಿರುತ್ತದೆ ಎಂದರೆ ಸಾಕ್ಷಿಯು ಸ್ವಲ್ಪ ಜಾಗವನ್ನು ರಸ್ತೆ ಮಾಡಲಾಗಿರುತ್ತದೆ ಮತ್ತು ಸ್ವಲ್ಪ ಜಾಗವನ್ನು ಓಣಿ ಆಗಿ ಬಿಡಲಾಗಿರುತ್ತದೆ ಎಂದು ನುಡಿಯುತ್ತಾರೆ.

9. ವಾದಿಯು ಪ್ರಸ್ತುತ ದಾವೆಯನ್ನು ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಮೇಲೆ ಮಾಡಿರುತ್ತಾರೆ. ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಒಟ್ಟು ವಿಸ್ತೀರ್ಣ ಪೂರ್ವ ಪಶ್ಚಿಮ 75 ಅಡಿ ಮತ್ತು ಉತ್ತರ ದಕ್ಷಿಣ 48 ಅಡಿ ಇರುತ್ತದೆ. ಖಾನೇಷುಮಾರಿ ಸಂಖ್ಯೆ 75 ಆಸ್ತಿಯು ಮೂಲತ: ಬಸ್ಸಪ್ಪನವರ ಚಿಕ್ಕನಂಜುಂಡಪ್ಪರವರಿಗೆ ಸೇರಿದ ಆಸ್ತಿ ಆಗಿರುತ್ತದೆ. 1945 ನೇ ಸಾಲಿನಲ್ಲಿ ೧ನೇ ಪ್ರತಿವಾದಿಯ ತಂದೆಯಾದ ನಂಜಪ್ಪ ರವರು ಸದರಿ ಬಸ್ಸಪ್ಪನವರ ಚಿಕ್ಕನಂಜುಂಡಪ್ಪರವರಿಂದ ಖಾನೇಷುಮಾರಿ ಸಂಖ್ಯೆ 75 ರ ಸಂಪೂರ್ಣ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ನಂಜಪ್ಪರವರ ಕ್ರಯ ಪತ್ರವನ್ನು ನೋಡಿರುತ್ತೇನೆ. ಸದರಿ ನಂಜಪ್ಪರವರ ಕ್ರಯ ಪತ್ರದ ಚಕ್ಕುಬಂದಿಯಲ್ಲಿ ಪೂರ್ವ ದಿಕ್ಕಿಗೆ ಏನು ಕಾಣಿಸಲಾಗಿದೆ ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಓಣಿ ಅಥವಾ ಸರ್ಕಾರಿ ರಸ್ತೆ ಎಂದು ಕಾಣಿಸಿರಬಹುದು ಎಂದು ನುಡಿಯುತ್ತಾರೆ. ಸದರಿ ನಂಜಪ್ಪರವರ ಕ್ರಯ ಪತ್ರದ ಚಕ್ಕುಬಂದಿಯಲ್ಲಿ ಪಶ್ಚಿಮ ದಿಕ್ಕಿಗೆ ಏನು ಕಾಣಿಸಲಾಗಿದೆ ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಲ್ಲಪ್ಪರವರ ವಠಾರ ಎಂದು ಕಾಣಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ನಲ್ಲಪ್ಪರವರ ವಠಾರದ ಖಾನೇಷುಮಾರಿ ಸಂಖ್ಯೆ 1 ಎಂದರೆ ಸರಿಯಲ್ಲ. ಸದರಿ ನಲ್ಲಪ್ಪರವರ ವಠಾರದ ಆಸ್ತಿಯ ಸಂಖ್ಯೆ ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಖಾನೇಷುಮಾರಿ ಸಂಖ್ಯೆ 64 ಮತ್ತು 1 ಎಂದು ನುಡಿಯುತ್ತಾರೆ. ಸದರಿ ಖಾನೇಷುಮಾರಿ ಸಂಖ್ಯೆ 1 ಆಸ್ತಿಯನ್ನು ನಂಜಪ್ಪರವರು ನಲ್ಲಪ್ಪರವರಿಂದ ಖರೀದಿಗೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ನಂಜಪ್ಪರವರು ಖರೀದಿಸಿರುವ ಖಾನೇಷುಮಾರಿ ಸಂಖ್ಯೆ 1 ಆಸ್ತಿಯ ಕ್ರಯ ಪತ್ರವನ್ನು ನೋಡಿರುತ್ತೇನೆ. ಸದರಿ ನಂಜಪ್ಪರವರು ಖರೀದಿಸಿರುವ ಖಾನೇಷುಮಾರಿ ಸಂಖ್ಯೆ 1 ಆಸ್ತಿಯ ಪೂರ್ವ ದಿಕ್ಕಿಗೆ ಬಸ್ಸಪ್ಪರವರ ವಠಾರ ಮತ್ತು ನಂಜಪ್ಪರವರ ವಠಾರ ಎಂದು ಕಾಣಿಸಲಾಗಿರುತ್ತದೆ. ಸದರಿ ನಂಜಪ್ಪರವರ ವಠಾರ ಎಂದು ಕಾಣಿಸಿರುವ ಆಸ್ತಿಯ ಕ್ರಮ ಸಂಖ್ಯೆ ಖಾನೇಷುಮಾರಿ 75 ಎಂದರೆ ಸರಿ. ಖಾನೇಷುಮಾರಿ ಸಂಖ್ಯೆ 1 ಮತ್ತು 75 ಅಕ್ಕ ಪಕ್ಕದ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ಖಾನೇಷುಮಾರಿ ಸಂಖ್ಯೆ 1 ಮತ್ತು 75 ಆಸ್ತಿಗಳು ಹಿಂದೆ ಮುಂದೆ ಇರುವ ಆಸ್ತಿಗಳಾಗಿರುತ್ತವೆ ಎಂದರೆ ಸರಿ.

10. 1963 ರಲ್ಲಿ ವಾದಿಯ ತಂದೆ ಖಾನೇಷುಮಾರಿ ಸಂಖ್ಯೆ 75 ಆಸ್ತಿಯನ್ನು ಖರೀದಿಸಿದ್ದಾರೆ ಎಂದು ಹೇಳುವ ಕ್ರಯ ಪತ್ರವನ್ನು ನೋಡಿರುತ್ತೇನೆ. ಆ ರೀತಿ ವಾದಿಯ ತಂದೆ ಖಾನೇಷುಮಾರಿ ಸಂಖ್ಯೆ 75 ಆಸ್ತಿಯಲ್ಲಿ ಪೂ-ಪ-75 ಅಡಿ ಮತ್ತು ಉ-ದ-24 ಅಡಿ ವಿಸ್ತೀರ್ಣದ ಆಸ್ತಿಯನ್ನು ಖರೀದಿಸಿರುತ್ತಾರೆ. ಆ ರೀತಿ ವಾದಿಯ ತಂದೆ ಖರೀದಿಸಿರುವ ಪೂ-ಪ-75 ಅಡಿ ಮತ್ತು ಉ-ದ-24 ಅಡಿ ವಿಸ್ತೀರ್ಣದ ಆಸ್ತಿ ಹೊರತುಪಡಿಸಿ ಉಳಿಕೆ ಆಸ್ತಿಯು ೧ನೇ ಪ್ರತಿವಾದಿಯ ತಂದೆ ನಂಜಪ್ಪರವರಿಗೆ ಸೇರಿದ ಆಸ್ತಿ ಆಗಿರುತ್ತದೆ ಎಂದರೆ ಸರಿ. 1963 ನೇ ಸಾಲಿನಲ್ಲಿ ವಾದಿಯ ತಂದೆ ಖರೀದಿಸಿದ್ದ ಆಸ್ತಿಯ ಪೂರ್ವ ದಿಕ್ಕಿಗೆ ಸರ್ಕಾರಿ ರಸ್ತೆ ಎಂದು ಕಾಣಿಸಲಾಗಿರುತ್ತದೆ. 1945 ನೇ ಸಾಲಿನಲ್ಲಿ ೧ನೇ ಪ್ರತಿವಾದಿಯ ತಂದೆ ಖರೀದಿಸಿದ್ದ ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಪೂರ್ವ ದಿಕ್ಕಿಗೆ ಕಾಣಿಸಿದ್ದ ಸರ್ಕಾರಿ ಓಣಿಯು 1963 ನೇ ಸಾಲಿನಲ್ಲಿ ವಾದಿಯ ತಂದೆ ಖರೀದಿಸಿದ್ದ ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಪೂರ್ವ ದಿಕ್ಕಿನಲ್ಲಿ ಕಾಣಿಸಿರುವ ಸರ್ಕಾರಿ ರಸ್ತೆ ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸರ್ಕಾರಿ ಓಣಿಯು ಸರ್ಕಾರಿ ರಸ್ತೆ ಆಗಿರುವ ವಿಚಾರ ನನಗೆ ತಿಳಿದಿದ್ದರು ಆ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ವಾದಿಯು ಪ್ರಸ್ತುತ ದಾವೆಯನ್ನು 29*17 ಅಡಿ ವಿಸ್ತೀರ್ಣದ ಆಸ್ತಿಗೆ ದಾವೆ ದಾಖಲಿಸಿರುತ್ತಾರೆ. ದಾವಾ ಆಸ್ತಿಯು ವಾದಿಗೆ ವಿಭಾಗ ಮೂಲಕ ಬಂದಂತಹ ಆಸ್ತಿ ಆಗಿರುತ್ತದೆ. ಆ ರೀತಿ ವಿಭಾಗವನ್ನು ನ್ಯಾಯಾಲಯದಲ್ಲಿ ಮಾಡಲಾಗಿರುತ್ತದೆ. ಸದರಿ ನ್ಯಾಯಾಲಯದ ಮೂಲಕ ವಿಭಾಗ ಮಾಡಲಾಗಿತ್ತು ಎಂದು ಹೇಳುವ ದಾವೆಯ ಕ್ರಮ ಸಂಖ್ಯೆ 440-2015 ಆಗಿರುತ್ತದೆ. ಸದರಿ ದಾವಾ ಸಂಖ್ಯೆ 440-2015 ರ ದಾಖಲೆಗಳನ್ನು ನೋಡಿರುವುದಿಲ್ಲ. ಸದರಿ ದಾವೆ ಸಂಖ್ಯೆ 440-2015 ದಾವೆಯನ್ನು ಯಾರ ಮೇಲೆ ಮತ್ತು ಯಾವ ಆಸ್ತಿಗಳ ಮೇಲೆ ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ನಿಪಿ.2 ದಾಖಲೆಯು ಸದರಿ ಮೂಲ ದಾವಾ ಸಂಖ್ಯೆ 440-2015 ರ ವಾದ ಪತ್ರ ಎಂದರೆ ಸರಿ. ಮೂಲ ದಾವಾ ಸಂಖ್ಯೆ 440-2015 ದಾವೆಯನ್ನು ಕೇವಲ 2 ಆಸ್ತಿಗಳ ಮೇಲೆ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.2 ರಲ್ಲಿ ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ವಿಸ್ತೀರ್ಣವನ್ನು ಕಾಣಿಸಿರುವುದಿಲ್ಲ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿ ಆ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯು ದಾವಾ ಸಂಖ್ಯೆ 440-2015 ದಾವೆಯನ್ನು ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ವಿಸ್ತೀರ್ಣವನ್ನು ನಮೂದಿಸದೇ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ಸಂಖ್ಯೆ 440-2015 ರಲ್ಲಿ ವಾದಿಗೆ ಮತ್ತು ಅವರ ಸಹೋದರನಿಗೆ ಎಷ್ಟು ವಿಸ್ತೀರ್ಣದ ಆಸ್ತಿಯನ್ನು ನೀಡಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಮೂಲ ದಾವಾ ಸಂಖ್ಯೆ 440-2015 ರ ರಾಜಿಯಲ್ಲಿ ಕೇವಲ ವಾದಿಗೆ ಮಾತ್ರ ಭಾಗ ನೀಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು ಪ್ರತಿವಾದಿಗಳ ನಡುವೆ ಈ ಹಿಂದಿನಿಂದಲೂ ವ್ಯಾಜ್ಯಗಳು ನಡೆಯುತ್ತಿದ್ದ ಮೇರೆಗೆ ಪ್ರತಿವಾದಿಗಳ ವಿರುದ್ದ ದ್ವೇಷ ಸಾಧಿಸುವ ಸಲುವಾಗಿ ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ವತ: ವಾದಿಗೆ ಕುಮ್ಮಕ್ಕು ನೀಡಿ ವಾದಿಯ ಮೂಲಕ ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

12. ನಿಡಿ.12 ನಕ್ಷೆಯಲ್ಲಿ ಕಾಣಿಸಿರುವ ತೆಂಗಿನ ಮರ ನಂಜಪ್ಪರವರಿಗೆ ಸೇರಿದ ತೆಂಗಿನ ಮರವಾಗಿರುತ್ತದೆ ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿ. ನಿ.ಡಿ.12 ನಕ್ಷೆಯಲ್ಲಿ ಕಾಣಿಸಿರುವ ಕೊಳವೆ ಬಾವಿ ನಂಜಪ್ಪರವರಿಗೆ ಸೇರಿದ್ದು ಎಂದು ಕಾಣಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ನಿ.ಡಿ.3 ಛಾಯಾಚಿತ್ರದಲ್ಲಿ ಕಾಣುತ್ತಿರುವ ತೆಂಗಿನ ಮರ ಮತ್ತು ಕೊಳವೆ ಬಾವಿ ನಿ.ಡಿ.12 ರಲ್ಲಿರುವ ತೆಂಗಿನ ಮರ ಮತ್ತು ಕೊಳವೆ ಬಾವಿ ಆಗಿರುತ್ತದೆ ಎಂದರೆ ಸಾಕ್ಷಿಯು ಕೊಳವೆ ಬಾವಿ ಗೌರಮ್ಮರವರ ಆಸ್ತಿಯಲ್ಲಿರುತ್ತದೆ ಮತ್ತು ತೆಂಗಿನ ಮರ ವಾದಿಗಳ ಆಸ್ತಿಯಲ್ಲಿರುತ್ತದೆ ಎಂದು ನುಡಿಯುತ್ತಾರೆ. ನಿ.ಡಿ.12 ನಕ್ಷೆಯನ್ನು ನಿಮ್ಮ ಪ್ರಕಾರ ತಪ್ಪಾಗಿ ಮಾಡಲಾಗಿದೆಯಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಾನು ನಿ.ಡಿ.12 ನಕ್ಷೆಯ ಆಧಾರದ ಮೇರೆಗೆ ಮೂಲ ದಾವೆ ಸಂಖ್ಯೆ 28-2020 ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿ.

**<u>ಮುಂದುವರೆದ ವಾಟೀ ಸವಾಲಿಗೆ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.